# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 242 | Pages. 2 | Date: 08-08-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 242 - ಪುಟಗಳು : 2 08-08-2025 ಶುಕ್ರವಾರ Ph: 8762954248 ದರ : ₹1


# ಹಾಸನ ಉಸ್ತುವಾರಿ ಕೃಷ್ಣಬೈರೇಗೌಡ ಹೆಗಲಿಗೆ

## ಕೆ.ಎನ್. ರಾಜಣ್ಣ ಮನವಿಗೆ ಈಗ ಸ್ಪಂದನೆ | ಜಿಲ್ಲೆಯಲ್ಲಿ ಇನ್ನು ಕಂದಾಯ ಸಚಿವರ ಆಡಳಿತ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಬಿಡುಗಡೆ ಮಾಡುವಂತೆ ಕಳೆದ ನಾಲ್ಕು ತಿಂಗಳಿಂದ ಗೋಗರೆಯುತ್ತಿದ್ದ ಕೆ.ಎನ್. ರಾಜಣ್ಣ ಅವರ ಮನವಿಗೆ ಸರ್ಕಾರ ಕಡೆಗೂ ಬೆಲೆ ನೀಡಿದ್ದು ಹಾಸನ ಉಸ್ತುವಾರಿ ಹೊರೆಯಿಂದ ಅವರನ್ನು ವಿಮುಕ್ತಿಗೊಳಿಸಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ ಸತೀಶ್ ಕಬಾಡಿ ಅವರು ಗುರುವಾರ ಈ ಸಂಬಂಧ ಆದೇಶ ಹೊರಡಿಸಿದ್ದು ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರನ್ನು ನೇಮಕ ಮಾಡಲಾಗಿದೆ. ಆ. 15ರ ಸ್ವಾತಂತ್ರ್ಯ ದಿನಾಚರಣೆ ಧ್ವಜಾರೋಹಣವನ್ನು ಕೃಷ್ಣಬೈರೇಗೌಡ ನೆರವೇರಿಸಲಿದ್ದು ಜಿಲ್ಲೆಯಲ್ಲಿ ಹೊಸ ಸಚಿವರ ಶಕೆ ಆರಂಭವಾಗಲಿದೆ.

**ಸಿಎಂ ಜೊತೆ ರಾಜಣ್ಣ ಮುನಿಸು**

ಇತ್ತೀಚೆಗಷ್ಟೇ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ಆಯ್ಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ರಾಜಣ್ಣ, ಹಾಸನ ಕ್ಷೇತ್ರದವರಿಗೆ ಹುಡಾ ಅಧ್ಯಕ್ಷ ಸ್ಥಾನ ನೀಡಬೇಕೆಂದು ಪಟ್ಟು ಹಿಡಿದಿದ್ದರು.

ಈ ವಿಚಾರದಲ್ಲಿ ಚರ್ಚೆ ಅನಾವಶ್ಯಕ ಎಂಬ ಸಿದ್ದರಾಮಯ್ಯ ಅವರ ಮಾತಿಗೆ ಸಿಟ್ಟಾಗಿದ್ದ ರಾಜಣ್ಣ, ಎಲ್ಲವನ್ನು ನೀವೇ ನಿರ್ಧಾರ ಮಾಡುವುದಾದರೆ ನಾನೇಕೆ ಉಸ್ತುವಾರಿ ಸಚಿವನಾಗಿರಬೇಕೆಂದು ಅಸಮಾಧಾನ ವ್ಯಕ್ತಪಡಿಸಿ ಸಭೆಯಿಂದ ಹೊರಬಂದಿದ್ದರು.

ಸಚಿವ ಸ್ಥಾನದಿಂದ ಅವರನ್ನು ಕೈ ಬಿಡಲು ಈ ವಿಚಾರವು ಕಾರಣವಾಗಿರಬಹುದು ಎನ್ನಲಾಗಿದೆ.

> ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೃಷ್ಣಬೈರೇಗೌಡ ಅವರು ನೇಮಕವಾಗಿದ್ದು ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಹಾಗೂ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗುತ್ತದೆ ಎಂಬ ವಿಶ್ವಾಸವಿದೆ. ಕಂದಾಯ ಸಚಿವರಾಗಿ ರಾಜ್ಯಾದ್ಯಂತ ಮನೆ ಮಾತಾಗಿರುವ ಅವರು ಜಿಲ್ಲೆಗೆ ಬರುತ್ತಿರುವುದು ಖುಷಿಯ ಸಂಗತಿ.
>
> **- ಶ್ರೇಯಸ್ ಪಟೇಲ್, ಸಂಸದ**

**ಪಕ್ಷ ಸಂಘಟನೆ ಹಿನ್ನಡೆ**

ಕೆ.ಎನ್.ರಾಜಣ್ಣ ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕವಾದ ಸಂದರ್ಭದಲ್ಲಿ ಜಿಲ್ಲೆಯ ಜನರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದರು. ಜಿಲ್ಲೆಯ ಜೆಡಿಎಸ್ ನಾಯಕರಿಗೆ ಟಕ್ಕರ್ ನೀಡುತ್ತಾರೆ, ಸಹಕಾರ ಸಂಸ್ಥೆಗಳಲ್ಲಾಗಿರುವ ಅಕ್ರಮ ಬಯಲಿಗೆಳೆಯುತ್ತಾರೆ, ಪಕ್ಷ ಸಂಘಟನೆ ಸದೃಢಗೊಳ್ಳುತ್ತದೆ ಎಂಬೆಲ್ಲ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ, ಯಾವುದೇ ನಿರೀಕ್ಷೆ ಈಡೇರಿಸದೆ ಸ್ವಪಕ್ಷದವರಿಂದಲೇ ರಾಜಣ್ಣ ಅವರನ್ನು ಬದಲಾಯಿಸಿ ಎಂಬ ಸನ್ನಿವೇಶ ಸೃಷ್ಟಿಯಾಗಿತ್ತು.

ಅವಕಾಶ ಸಿಕ್ಕಾಗಲೆಲ್ಲ ಜಿಲ್ಲಾ ಮುಖಂಡರು ಹೈಕಮಾಂಡ್‌ಗೆ ಈ ವಿಷಯ ಪ್ರಸ್ತಾಪಿಸುತ್ತಲೇ ಇದ್ದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ತಮ್ಮ ಕಾರ್ಯವೈಖರಿಯಿಂದ ಗಮನ ಸೆಳೆದಿದ್ದಾರೆ. ಕಂದಾಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ತರಲು ಪ್ರಯತ್ನಿಸುತ್ತಿದ್ದಾರೆ. ಸೌಮ್ಯ ಸ್ವಭಾವ, ಚುರುಕತನ, ರಾಜಕೀಯ ಅನುಭವ, ಚಾಣಾಕ್ಷತೆಗೆ ಹೆಸರಾಗಿರುವ ಕೃಷ್ಣಬೈರೇಗೌಡರ ಮೇಲೆ ಜಿಲ್ಲೆಯ ಜನರ ನಿರೀಕ್ಷೆಗಳು ಹೆಚ್ಚಿವೆ.

### ಸಚಿವ ಸ್ಥಾನ ಬೇಡವೆಂದಿದ್ದ ರಾಜಣ್ಣ

2023ರಲ್ಲಿ 136 ಸ್ಥಾನಗಳೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಕಾಂಗ್ರೆಸ್‌ಗೆ ಜಿಲ್ಲೆಯ ಕೇವಲ ಅರಸೀಕೆರೆಯೊಂದೇ ಕೈ ಹಿಡಿದಿತ್ತು. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಪಲಾಯನಗೈದಿದ್ದ ಹಾಗೂ ಸರ್ಕಾರ ಬಂದರೆ ಸಚಿವ ಸ್ಥಾನ ಸಿಗುತ್ತದೆಂಬ ನಂಬಿಕೆಯಲ್ಲಿದ್ದ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಆರಂಭದಿಂದಲೂ ನಿರಾಸೆಯಾಗಿತ್ತು. ತುಮಕೂರಿನ ಕೆ.ಎನ್. ರಾಜಣ್ಣ ಅವರಿಗೆ ಜಿಲ್ಲಾ ಉಸ್ತುವಾರಿ ಹುದ್ದೆ ನೀಡಿ ಶಿವಲಿಂಗೇಗೌಡ ಅವರನ್ನು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರನ್ನಾಗಿಸಲಾಗಿತ್ತು.

ಆರಂಭದಲ್ಲಿ ರಾಜಣ್ಣ ಉತ್ಸಾಹದಿಂದ ಜಿಲ್ಲಾ ಭೇಟಿ, ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದ್ದರಾದರೂ ಇತ್ತೀಚೆಗೆ ಜಿಲ್ಲೆಯ ಕುರಿತು ಉದಾಸೀನ ತೋರಿದ್ದರು. ಹಾಸನಾಂಬ ಜಾತ್ರಾ ಮಹೋತ್ಸವದ ಅವ್ಯವಸ್ಥೆ, ಪಕ್ಷ ಸಂಘಟನೆ ನಿರೀಕ್ಷಿತ ಮಟ್ಟದಲ್ಲಿ ಆಗದೇ ಇರುವುದು ಜಿಲ್ಲಾ ಮುಖಂಡರಲ್ಲಿ ರಾಜಣ್ಣ ಕುರಿತು ಅಸಮಾಧಾನಕ್ಕೆ ಕಾರಣವಾಗಿತ್ತು.ವಯೋಸಹಜ ಕಾರಣದಿಂದ ಹಾಸನ ಜವಾಬ್ದಾರಿ ಬೇಡವೆಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಹಲವು ಪತ್ರ ಬರೆದಿದ್ದರು.

# ಸ್ವಾತಂತ್ರ್ಯ ದಿನಾಚರಣೆಗೆ ಗೈರಾಗುವಂತಿಲ್ಲ: ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಆ. 15ರ ಸ್ವಾತಂತ್ರ್ಯ ದಿನಾಚರಣೆಗೆ ಕಡ್ಡಾಯವಾಗಿ ಹಾಜರಿರಬೇಕು ಎಂದು ಶಾಸಕ ಸಿಮೆಂಟ್ ಮಂಜು ಸೂಚಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಆ. 15 ರಂದು ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲು ತೀರ್ಮಾನಿಸಲಾಗಿದೆ. ಮೈದಾನವನ್ನು ಸ್ವಚ್ಛಗೊಳಿಸಿ ಮಕ್ಕಳು ಮಳೆಯಲ್ಲಿ ನೆನೆಯದಂತೆ ಶಾಮಿಯಾನದ ವ್ಯವಸ್ಥೆ ಮಾಡಲಾಗುತ್ತದೆ. ಆಲೂರಿನಲ್ಲಿ ಧ್ವಜಾರೋಣ ನೆರವೇರಿದ ಬಳಿಕ ಬೆಳಿಗ್ಗೆ 10 ಗಂಟೆಗೆ ಸಕಲೇಶಪುರದಲ್ಲಿ ಕಾರ್ಯಕ್ರಮ ನೆರವೇರಲಿದೆ ಎಂದರು.

# ವರಮಹಾಲಕ್ಷ್ಮಿ ಹಬ್ಬ: ಖರೀದಿ ಜೋರು



ಹಾಸನ: ವರಮಹಾಲಕ್ಷ್ಮೀ ಹಬ್ಬ ಆಚರಿಸಲು ಸಾರ್ವಜನಿಕರು ಸಿದ್ಧತೆ ಮಾಡಿಕೊಂಡಿದ್ದು ಗುರುವಾರ ನಗರದಲ್ಲಿ ಪೂಜಾ ಸಾಮಗ್ರಿ ಖರೀದಿ ಪ್ರಕ್ರಿಯೆ ಜೋರಾಗಿತ್ತು.

ಶುಕ್ರವಾರದ ಪೂಜೆಗೆ ಜಿಲ್ಲಾದ್ಯಂತ ತಯಾರಿ ನಡೆದಿದೆ. ನಗರದ ಮಹಾವೀರ ವೃತ್ತ, ಕಸ್ತೂರ ಬಾ ರಸ್ತೆ, ಕಟ್ಟಿನಕೆರೆ ಮಾರುಕಟ್ಟೆ, ಬಿ.ಎಂ. ರಸ್ತೆ, ಸಾಲಗಾಮೆ ರಸ್ತೆ ಸೇರಿ ಪ್ರಮುಖ ರಸ್ತೆಗಳಲ್ಲಿ ವ್ಯಾಪಾರ ಜೋರಾಗಿ ನಡೆಯಿತು.

ಸೇವಂತಿಗೆ ಹೂವು ಒಂದು ಮಾರಿಗೆ 100 ರಿಂದ 150 ರೂ., ಪುಟ್ಟಬಾಳೆ ಕೆ.ಜಿ.ಗೆ 120 ರಿಂದ 150 ರೂ., ತಾವರೆ ಎರಡಕ್ಕೆ 100 ರಿಂದ 120 ರೂ., ಸೇಬು ಕೆ.ಜಿ.ಗೆ 100 ರಿಂದ 200 ರೂ., ಬಾಳೆ ಕಂದು ಎರಡಕ್ಕೆ 60 ರಿಂದ 100 ರೂ., ಮಾವಿನ ಎಲೆ ಕಟ್ಟಿಗೆ 20 ರೂ.ನಂತೆ ಮಾರಾಟವಾಯಿತು.

# ಬ್ಯಾನರ್-ಫ್ಲೆಕ್ಸ್‌ಗೆ ಮಾನದಂಡ: ಹಿಂದುಪರ ಸಂಘಟನೆಗಳ ಖಂಡನೆ

## ಪ್ರಚೋದನಕಾರಿ ಬರಹ ಮುದ್ರಿಸಬೇಡಿ | ಪ್ರಿಂಟಿಂಗ್ ಮಾಲೀಕರಿಗೆ ಪೊಲೀಸರ ಸೂಚನೆ





**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಂಬರುವ ಗಣೇಶ ಉತ್ಸವ ಹಾಗೂ ಈದ್ ಮಿಲಾದ್ ಆಚರಣೆಯಲ್ಲಿ ಕೋಮು ಸಂಘರ್ಷಕ್ಕೆ ಎಡೆಮಾಡಿಕೊಡುವ ಫ್ಲೆಕ್ಸ್-ಬ್ಯಾನರ್ ನಿಷೇಧಿಸಬೇಕೆಂದು ಜಿಲ್ಲೆಯ ಎಲ್ಲಾ ಪ್ರಿಂಟರ್ಸ್ ಮಾಲೀಕರು ಮತ್ತು ಬಂಟಿಂಗ್ಸ್ ವ್ಯಾಪಾರಿಗಳಿಗೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ತಮ್ಮಯ್ಯ ಹಾಗೂ ವೆಂಕಟೇಶ್ ನಾಯ್ಡು ನೇತೃತ್ವದಲ್ಲಿ ಸಭೆ ನಡೆಯಿತು.

ಕೋಮು ಸಂಘರ್ಷಕ್ಕೆ ಪ್ರಚೋದನೆ ನೀಡುವ ಬರಹಗಳುಳ್ಳ ಬ್ಯಾನರ್‌ಗಳನ್ನು ಪ್ರಿಂಟ್ ಮಾಡಬಾರದು. ಪರಿಸರಕ್ಕೆ ಧಕ್ಕೆಯಾಗುವ ಉದ್ದೇಶದಿಂದ ಆದಷ್ಟು ಬ್ಯಾನರ್ ಹಾಗು ಫ್ಲೆಕ್ಸ್‌ಗಳಿಗೆ ಕಡಿವಾಣ ಹಾಕಬೇಕು. ಪ್ರಚೋದನಕಾರಿ ಬ್ಯಾನರ್‌ಗಳನ್ನು ಪ್ರಿಂಟ್ ಮಾಡುವಂತೆ ಯಾರಾದರೂ ಬಂದರೆ ಪೊಲೀಸರ ಗಮನಕ್ಕೆ ತರಬೇಕು ಎಂದು ನಿರ್ದೇಶನ ನೀಡಿದರು.

**ಸಂಭ್ರಮ ಹತ್ತಿಕ್ಕುವ ಯತ್ನ**

ರಾಜ್ಯ ಸರ್ಕಾರ ರಾಜ್ಯದಲ್ಲಿ ಗಣೇಶ ಉತ್ಸವದ ಸಂಭ್ರಮ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ ಎಂದು ನಗರದ ಪಾಂಚಜನ್ಯ ಹಿಂದು ಗಣಪತಿ ಸಮಿತಿ ಕಾರ್ಯದರ್ಶಿ ವೇಣುಗೋಪಾಲ್ ಆರೋಪಿಸಿದ್ದಾರೆ.

ದೇಶದೆಲ್ಲೆಡೆ ಗಣೇಶೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಆದರೆ ಕರ್ನಾಟಕದಲ್ಲಿ ಮಾತ್ರ ಗಣೇಶ ಹಬ್ಬ ಆಚರಿಸಲು ಇನ್ನಿಲ್ಲದ ನಿಯಮ, ನಿಬಂಧನೆಗಳನ್ನು ಸರ್ಕಾರ ರೂಪಿಸಿದೆ ಎಂದು ದೂರಿದ್ದಾರೆ.

ಅಂತಹ ಒಂದು ಪ್ರಯತ್ನ ಹಾಸನದಲ್ಲಿ ಮಾಡಲಾಗುತ್ತಿದೆ, ಕಳೆದ ವರ್ಷ ಪಾಂಚಜನ್ಯ ಗಣೇಶೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಆ ವೇಳೆ ನಾವೆಲ್ಲ ಹಿಂದು ನಾವೆಲ್ಲ ಒಂದು ಎನ್ನುವ ಬ್ಯಾನರ್, ಭಿತ್ತಿ ಪತ್ರ ಹಾಕಲಾಗಿತ್ತು. ಆ ನಂತರ ಇದೇ ಸರ್ಕಾರ ಫ್ಲೆಕ್ಸ್ ಅಂಗಡಿ ಮಾಲೀಕರು ಮತ್ತು ಪ್ರಿಂಟಿಂಗ್ ಪ್ರೆಸ್ ಮಾಲೀಕರನ್ನು ಕರೆದು ಈ ರೀತಿಯ ಹೇಳಿಕೆ, ಘೋಷಣೆಗಳನ್ನು ನೀವು ಪ್ರಿಂಟ್ ಮಾಡಬಾರದು ಎಂಬ ನಿಯಮ ಮಾಡಿತ್ತು.

ಎಸ್ಪಿ ಕಚೇರಿಯಲ್ಲಿ ಫ್ಲೆಕ್ಸ್ ಅಂಗಡಿ ಮಾಲೀಕರು ಮತ್ತು ಪ್ರಿಂಟಿಂಗ್ ಪ್ರೆಸ್ ಮಾಲೀಕರ ಸಭೆ ಕರೆದು ನೀವು ಪ್ರಿಂಟ್ ಮಾಡುವ ಪ್ರತಿಯೊಂದು ಭಿತ್ತಿ ಪತ್ರಗಳ ಬರಹಗಳನ್ನು ನಮಗೆ ತೋರಿಸಿ, ನಮ್ಮಿಂದ ಅನುಮತಿ ಪಡೆದು ನಂತರ ಪ್ರಿಂಟ್ ಮಾಡಬೇಕು ಎಂಬ ಸೂಚನೆಯನ್ನು ಪೊಲೀಸರ ಮೂಲಕ ಸರ್ಕಾರ ಅಂಗಡಿ ಮಾಲೀಕರಿಗೆ ಕೊಡಿಸಿದೆ ಎಂದಿದ್ದಾರೆ. ಹಾಗೆಯೇ ಗಣೇಶ ಪ್ರತಿಷ್ಠಾಪನೆ ಮಾಡುವ ಸಂಘಟಕರೂ ಫ್ಲೆಕ್ಸ್ ಮಾಡಿಸುವ ಮುನ್ನ ಪೊಲೀಸರಿಗೆ ತೋರಿಸಿ, ಅವರು ಓಕೆ ಅಂದ ನಂತರ ಮುದ್ರಿಸಬೇಕು ಎಂದು ತಾಕೀತು ಮಾಡಲಾಗಿದೆ.

ಹಿಂದುಗಳ ಹಬ್ಬಗಳಿಗೆ ಮಾತ್ರ ಸರ್ಕಾರ ನಿಯಮ ನಿಬಂಧನೆ ಮಾಡುತ್ತದೆ, ಅನ್ಯ ಸಮಾಜದ ಯಾವುದೇ ಹಬ್ಬಕ್ಕೂ ಈ ರೀತಿಯ ನಿಯಮ ಇರುವುದಿಲ್ಲ, ನಾಲ್ಕೈದು ಜನರು ಬಾವುಟ ಹಿಡಿದು ಒಂದೇ ಬೈಕಿನಲ್ಲಿ ಹೋದರೂ, ರಸ್ತೆ ಮಧ್ಯೆ ಗೋವನ್ನು ಕಡಿದರೂ, ಅನಧಿಕೃತ ಕಸಾಯಿಖಾನೆಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಸರ್ಕಾರಕ್ಕೆ ಹಿಂದೂಗಳ ಮೇಲೆ, ಹಿಂದುಗಳ ಹಬ್ಬಗಳ ಮೇಲೆ ಯಾಕೆ ಇತರ ದ್ವೇಷ ತಿಳಿಯದು ಎಂದಿದ್ದಾರೆ. ಒಂದು ಸಮಾಜವನ್ನು ಓಲೈಸುವ ಸಲುವಾಗಿ ಭಾರತದ ಹಿಂದುಗಳನ್ನ ಒಗ್ಗೂಡಿಸುವ ಗಣೇಶೋತ್ಸವ ಹಾಗೂ ಅವರ ಭಾವನೆಗಳನ್ನು ದಮನ ಮಾಡುವ ಪ್ರಯತ್ನ ಇದಾಗಿದೆ ಎಂದು ಖಂಡಿಸಿದ್ದಾರೆ.

# ಸಕಲೇಶಪುರದಲ್ಲಿ ಬ್ರಹ್ಮ ಕುಮಾರಿ ಸಮಾಜದಿಂದ ರಕ್ಷಾ ಬಂಧನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬ್ರಹ್ಮ ಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯ ವತಿಯಿಂದ ರಕ್ಷಾ ಬಂಧನ ಹಮ್ಮಿಕೊಳ್ಳಲಾಗಿತ್ತು.

ವಿಶ್ವವಿದ್ಯಾನಿಲಯ ಆಲೂರು ವಿಭಾಗ ಮುಖ್ಯಸ್ಥೆ ವಿಜಯ ಮಾತನಾಡಿ, ಭಾರತದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನೆರವೇರುತ್ತವೆ. ಹಲವರು ಸನಾತನ ಪರಂಪರೆಯ ಹಬ್ಬಗಳನ್ನು ಆಚರಿಸುತ್ತಿದ್ದಾರೆ. ಹಬ್ಬದ ನೈಜ ಅರ್ಥ ತಿಳಿದುಕೊಂಡು ಆಚರಿಸುವುದು ಮುಖ್ಯ. ರಕ್ಷಾ ಬಂಧನ ದ್ರೌಪದಿಯು ಶ್ರೀಕೃಷ್ಣನ ಕೈಗೆ ರಾಖಿ ಕಟ್ಟಿದ ಪ್ರಸಂಗ, ಇಂದ್ರ-ಶಚಿ, ಯಮ-ಯಮುನೆಯ ಕಥೆಗಳನ್ನು ಒಳಗೊಂಡಿದೆ. ರಕ್ಷಾ ಬಂಧನ ಎಂದರೆ ಭಗವಂತನ ನೆನಪಿನಲ್ಲಿ ಸದಾ ತಲ್ಲೀನರಾಗುವುದು. ಆಗ ದೇವ ದೃಷ್ಟಿಯ ರಕ್ಷಣೆ ಸಿಗುತ್ತದೆ ಎಂದರು.

ಬ್ರಹ್ಮ ಕುಮಾರಿ ಸಂಸ್ಥೆಯ ಸರೋಜ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಮನುಷ್ಯ ದಿಕ್ಕಿಲ್ಲದ ಗಾಳಿಪಟದಂತೆ ಬದುಕುತ್ತಿದ್ದಾನೆ. ಹಣದ ಹಿಂದೆ ಓಡುತ್ತಿರುವ ಸಮಾಜ ಶಾಂತಿ ಮತ್ತು ನೆಮ್ಮದಿ ಕಳೆದುಕೊಂಡಿದೆ. ಬದುಕಿಗೆ ಹಣ ಅವಶ್ಯಕವಾದರೂ ದುರಾಸೆ ಇರಬಾರದು. ಸದಾ ಎಚ್ಚರದಿಂದ, ಯಾರನ್ನೂ ನೋಯಿಸದೆ, ಧರ್ಮ ಪಥದಲ್ಲಿ ಸಾಗಬೇಕು. ಕಲಿಯುಗ ಅಂತ್ಯದ ಸಮೀಪದಲ್ಲಿ ನಾವು ನಿಂತಿದ್ದೇವೆ. ದೇಶ-ದೇಶಗಳ ಯುದ್ಧ, ಆರ್ಥಿಕ ಪರಿಸ್ಥಿತಿಯ ಮೇಲೆ ಹೊಡೆತ, ಬಡತನ, ದುಶ್ಚಟ, ನೆಮ್ಮದಿ ಇಲ್ಲದ ಜೀವನ. ಗುರುವಿಲ್ಲದ ಗುರಿ, ಭಗವಂತನ ನೆನಪಿಲ್ಲದ ಹಣದ ವ್ಯಾಮೋಹಿಗಳು ಹೀಗೆ ಹತ್ತು ಹಲವಾರು ವಿಚಾರಗಳಲ್ಲಿ ಮನುಷ್ಯರು ನರಳಾಡುವ ಪರಿಸ್ಥಿತಿಗೆ ಕಾರಣರಾಗಿದ್ದಾರೆ. ಕರ್ಮದ ಅನುಸಾರವಾಗಿ ಪ್ರತಿಯೊಬ್ಬರೂ ಭೋಗಕ್ಕೆ ಕಾರಣರಾಗಿದ್ದಾರೆಂದರು.

ಬ್ರಹ್ಮ ಕುಮಾರಿ ಸಮಾಜದ ಬಿ.ಕೆ. ಚಂದ್ರಿಕಾ, ಶಿವಣ್ಣ, ಶಶಿ, ಲಕ್ಷ್ಮೀ ರಂಗನಾಥ್, ಲಯನ್ಸ್ ಕ್ಲಬ್ ಕಾರ್ಯದರ್ಶಿ ಕೆ.ಎಂ. ಬಸವರಾಜ್, ಅಕ್ಕಮಹಾದೇವಿ ಮಹಿಳಾ ವೇದಿಕೆ ಅಧ್ಯಕ್ಷೆ ಕೋಮಲ ದಿನೇಶ್, ಕರವೇ ಅಧ್ಯಕ್ಷ ರಮೇಶ್ ಪೂಜಾರಿ ಮತ್ತಿತರರಿದ್ದರು.

# ಎರಡೂವರೆ ವರ್ಷದ ಮಗು ಹೊತ್ತೊಯ್ದ ಪ್ರಕರಣ ಸುಖಾಂತ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜ್ಯುವೆಲ್ಲರಿ ಮಳಿಗೆ ಮುಂದೆ ಅಳುತ್ತಾ ನಿಂತಿದ್ದ ಎರಡೂವರೆ ವರ್ಷದ ಮಗುವನ್ನು ಮಹಿಳೆಯೊಬ್ಬರು ಕರೆದೊಯ್ದು ಹಲವು ತಾಸುಗಳ ಬಳಿಕ ಹೆತ್ತಮ್ಮನಿಗೆ ಒಪ್ಪಿಸಿದ್ದು ಪ್ರಕರಣ ಸುಖಾಂತ್ಯ ಕಂಡಿದೆ.

ತಾಲ್ಲೂಕಿನ ಚಿಕ್ಕಬೂವನಹಳ್ಳಿ ಗ್ರಾಮದ ಉಷಾ ಎಂಬುವವರ ಪುತ್ರಿ ಚೈತನ್ಯ ಕೆಲಹೊತ್ತು ನಾಪತ್ತೆಯಾಗಿದ್ದಳು. ತಣ್ಣೀರುಹಳ್ಳದ ಭವಾನಿ ಎಂಬುವವರು ತಮ್ಮ ಮನೆಗೆ ಮಗುವನ್ನು ಕರೆದೊಯ್ದಿದ್ದರು.

ನಗರದ ಗಾಂಧಿ ಬಜಾರ್‌ನಲ್ಲಿರುವ ಪೂಜಾ ಜ್ಯುವೆಲ್ಲರಿ ಶಾಪ್‌ಗೆ ಉಷಾ ಚಿನ್ನಾಭರಣ ಖರೀದಿಗಾಗಿ ಬಂದಿದ್ದರು. ಈ ವೇಳೆ ಮಗು ಚೈತನ್ಯ ಆಟವಾಡುತ್ತಾ ಹೊರಗೆ ಬಂದಿದೆ.

ಅದೇ ರಸ್ತೆಯಲ್ಲಿ ಸಾಗುತ್ತಿದ್ದ ಭವಾನಿ ನಿಂತಿದ್ದ ಮಗುವನ್ನು ಎತ್ತಿಕೊಂಡು ನಗರ ಸಾರಿಗೆ ಬಸ್ ಮೂಲಕ ತಣ್ಣೀರುಹಳ್ಳದ ಮನೆಗೆ ತೆರಳಿದ್ದರು.

ಮತ್ತೊಂದೆಡೆ ಚೈತನ್ಯಳ ಹೆತ್ತ ತಾಯಿ ಖರೀದಿ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಮಗುವಿಗಾಗಿ ಹುಡುಕಾಟ ನಡೆಸಿದ್ದಾರೆ. ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿದಾಗ ಮಹಿಳೆಯೊಬ್ಬರು ಮಗು ಎತ್ತಿಕೊಂಡು ಹೋಗಿರುವುದು ದೃಢಪಟ್ಟಿದೆ. ಉಷಾ ಅವರು ನಗರ ಠಾಣೆಗೆ ದೂರು ನೀಡಿದ ಬಳಿಕ ಪೊಲೀಸರು ಪತ್ತೆ ಕಾರ್ಯ ಆರಂಭಿಸಿದ್ದರು.

ಸಿಸಿಟಿವಿ ದೃಶ್ಯಾವಳಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವುದನ್ನು ಗಮನಿಸಿದ ಭವಾನಿ ತಕ್ಷಣವೇ ನಗರ ಠಾಣೆಗೆ ಬಂದು ಮಗುವನ್ನು ಒಪ್ಪಿಸಿದ್ದಾರೆ.

ಜ್ಯುವೆಲ್ಲರಿ ಶಾಪ್ ಮುಂದೆ ಮಗು ಅಳುತ್ತಾ ನಿಂತಿತ್ತು. ಯಾರೂ ಮಗುವಿನ ಜೊತೆ ಕಾಣಿಸದೆ ಇದ್ದುದರಿಂದ ಮನೆಗೆ ಕರೆದೊಯ್ದು ಊಟ ಮಾಡಿಸಿ ಮಲಗಿಸಿದ್ದೆಯೆಂದು ಭವಾನಿ ಹೇಳಿದ್ದಾರೆ. ಚೈತನ್ಯ ಸುಮಾರು ಮೂರು ಗಂಟೆ ಬಳಿಕ ಹೆತ್ತಮ್ಮನ ಮಡಿಲು ಸೇರಿ ಪ್ರಕರಣ ಸುಖಾಂತ್ಯ ಕಂಡಿದೆ.

# ಅಭಿವೃದ್ಧಿ ಮರೆತ ಎ. ಮಂಜುರಿಂದ ರಾಜಕೀಯ ದ್ವೇಷ

## ಮಾಸ್ಟರ್ ಪ್ಲಾನ್ ದುರ್ಬಳಕೆಯಾಗಿಲ್ಲ | ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಸವಾಲು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಯಾವ ಕೆಲಸವನ್ನ ಮಾಡದ ಶಾಸಕ ಎ. ಮಂಜು ವಿರೋಧ ಪಕ್ಷದ ವಿರುದ್ಧ ದ್ವೇಷ ಸಾಧಿಸುವುದನ್ನೇ ಕಾಯಕವನ್ನಾಗಿಸಿಕೊಂಡಿದ್ದಾರೆ ಎಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶ್ರೀಧರ್‌ಗೌಡ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿ ಹಿನ್ನೆಲೆ ಸಿದ್ಧಗೊಂಡಿರುವ ಟಿಮಾಸ್ಟರ್ ಪ್ಲಾನ್-2041ಟಿ ದುರ್ಬಳಕೆ ಮಾಡಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುವೆ. 2015-18ರ ಅವಧಿಯಲ್ಲಿ ಮಾಸ್ಟರ್ ಪ್ಲಾನ್‌ನ ಸಿದ್ಧತೆ ಆರಂಭಗೊಂಡಿದೆ. ಈ ಅವಧಿಯಲ್ಲಿ ಎ. ಮಂಜು ಅವರೇ ಸಚಿವರಾಗಿದ್ದರು. 2022-23ರಲ್ಲಿ ಈ ಉದ್ದೇಶಿತ ಪ್ಲಾನ್‌ನ ಕುರಿತು ಸಾರ್ವಜನಿಕ ಆಕ್ಷೇಪಣೆ ಸಲ್ಲಿಕೆಗೆ ವಾರ್ತಾ ಇಲಾಖೆಯಿಂದ ಪ್ರಕಟಣೆ ಹೊರಡಿಸಲಾಗಿತ್ತು. ಪ್ಲಾನ್‌ನ ಸಾಧಕ-ಬಾಧಕಗಳ ಕುರಿತು ಕ್ಷೇತ್ರದ ಸಾರ್ವಜನಿಕರೊಂದಿಗೆ ಶಾಸಕರು ಸಮಾಲೋಚನೆ ನಡೆಸಿಲ್ಲ ಎಂದರು.

ತಾತ್ಕಾಲಿಕವಾಗಿ ರೂಪಗೊಂಡಿರುವ ಪ್ಲಾನ್ ಅನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತೋರಿಸಿ ಅನುಷ್ಠಾನಕ್ಕೆ ತರುವ ಕೆಲಸ ನಡೆದಿದೆ. ಅದರ ಪ್ರಮುಖ ಉದ್ದೇಶ ಇಲ್ಲಿ ಕೈಗಾರಿಕೆ ಸ್ಥಾಪಿಸಿ ಉದ್ಯೋಗ ಕಲ್ಪಿಸುವುದು ಮೊದಲ ಕರ್ತವ್ಯವಾಗಿದೆ ವಿನಃ ಯಾವುದೇ ಸ್ವಾರ್ಥವಿಲ್ಲ. ನಗರ ಯೋಜನಾ ಪ್ರಾಧಿಕಾರದ ಆಡಳಿತ ಮಂಡಳಿ ಪ್ಲಾನ್‌ನಲ್ಲಿ ಕಂಡುಬಂದಿರುವ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಮಲ್ಲಿಕಾರ್ಜುನಸ್ವಾಮಿ ಸೇರಿ ಕೆಲವು ರೈತರು ನನ್ನ ಬಳಿ ಹಾಗು ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರೊಂದಿಗೆ ಚರ್ಚಿಸಿದ್ದಾರೆ. ಈ ಸಂಬಂಧ ಯಾವ ಆಸೆ ಆಮಿಷ ಒಡ್ಡಿಲ್ಲ.

ಶಾಸಕ ಎ. ಮಂಜು ಅವರು ವಸೂಲಿ ದಂಧೆ ನಡೆದಿದೆ ಎಂದು ಆರೋಪಿಸಿರುವುದು ಖಂಡನೀಯವೆಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶೀರ್ವಾದಿಂದ ಹಿಂದಿನ ಅವಧಿಯಲ್ಲಿ ಸಚಿವರಾಗಿದ್ದ ಎ. ಮಂಜು ಕ್ಷೇತ್ರದ ಅಭಿವೃದ್ಧಿಗೆ ಹಣ ಪಡೆದಿದ್ದಾರೆ. ಈಗ ಬೇರೆ ಪಕ್ಷದಲ್ಲಿದ್ದೇನೆ ಎಂಬ ಅಹಂನಿಂದ ಮುಖ್ಯಮಂತ್ರಿ ವಿರುದ್ಧ ನಾಲಿಗೆ ಹರಿಬಿಡುತ್ತಿದ್ದಾರೆ. ಅವರ ರಾಜಕೀಯ ನಡೆ ಏನೆಂಬುದು ಜನರಿಗೆ ಗೊತ್ತಿರುವ ವಿಚಾರ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಯೋಜನೆ ರೂಪಿಸಿ ಸರ್ಕಾರದಿಂದ ಅನುದಾನ ತರುವ ನಿಟ್ಟಿನಲ್ಲಿ ಇದುವರೆಗೂ ಯಾವುದೇ ಕ್ರಮವಹಿಸಿಲ್ಲ. ಬದಲಾಗಿ ರಾಜಕೀಯವಾಗಿ ಎದುರಾಳಿಗಳಾಗಿರುವ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ನೇತೃತ್ವದಲ್ಲಿ ಉತ್ತಮವಾಗಿ ನಡೆಯುತ್ತಿರುವ ಶಕ್ತಿ ದೇವತಾ ಪೀಠ ಶ್ರೀ ಅರಸೀಕಟ್ಟೆಯಮ್ಮ ದೇವಸ್ಥಾನ ಸಮಿತಿ, ಕೃಷ್ಣೇಗೌಡರ ಕ್ರಷರ್ ಮತ್ತು ನನ್ನ ವಿರುದ್ಧ ಶಾಸನ ಸಭೆಯಲ್ಲಿ ಪ್ರತಿಪಾದಿಸಿ ನಮ್ಮನ್ನು ರಾಜಕೀಯವಾಗಿ ಹಣಿಯುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಸುಬಾನ್ ಷರಿಪ್, ಗ್ಯಾರಂಟಿ ಸಮಿತಿ ಸದಸ್ಯರಾದ ಸಲೀಂ, ನಾಗರಾಜು, ವಕೀಲ ಪ್ರಶಾಂತ್, ಲಕ್ಷ್ಮಣ್ ಇತರರು ಇದ್ದರು.

# ಶಾಲಾ ಮಕ್ಕಳಿಗಿಲ್ಲ ಶನಿವಾರದ ಸಂಭ್ರಮ

## ಡಿಎಸ್‌ಇಆರ್‌ಟಿ ಆದೇಶ ಪಾಲನೆಗೆ ಅಧಿಕಾರಿಗಳ ನಿರ್ಲಕ್ಷ್ಯ | ಪರೀಕ್ಷಾ ಫಲಿತಾಂಶವಷ್ಟೇ ಎಲ್ಲರ ಗುರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಶಾಲಾ ಮಕ್ಕಳನ್ನು ಪಠ್ಯ ಪುಸ್ತಕ ಅಧ್ಯಯನಕ್ಕಷ್ಟೇ ಸೀಮಿತಗೊಳಿಸದೆ ಇತರ ಚಟುವಟಿಕೆಗಳಲ್ಲೂ ಸಕ್ರಿಯರಾಗಿಸಬೇಕೆಂಬ ಉದ್ದೇಶದಿಂದ ಜಾರಿಗೊಳಿಸಲಾದ ಬ್ಯಾಗ್ ರಹಿತ ಟಶನಿವಾರ ಸಂಭ್ರಮಟ ಯೋಜನೆ ಜಿಲ್ಲೆಯಲ್ಲಿ ಘೋಷಣೆಗಷ್ಟೇ ಸೀಮಿತವಾಗಿದೆ.

ಶಾಲೆಗೆ ಬ್ಯಾಗ್ ರಹಿತವಾಗಿ ತೆರಳಿ ಖುಷಿಯಿಂದ ಕಲಿಯುವ ವಾತಾವರಣ ಸೃಷ್ಟಿಸಲು ಪ್ರತಿ ತಿಂಗಳ 3ನೇ ಶನಿವಾರ ಪ್ರಾಥಮಿಕ ಶಾಲಾ ಹಂತದಲ್ಲಿ ಟಬ್ಯಾಗ್ ರಹಿತ ದಿನಟ ಅಥವಾ ಟಸಂಭ್ರಮ ಶನಿವಾರಟ ಹಮ್ಮಿಕೊಳ್ಳುವಂತೆ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆ (ಡಿಎಸ್ಇಆರ್‌ಟಿ) ಆದೇಶ ಹೊರಡಿಸಿತ್ತು. ಈ ದಿನದಂದು ಮಕ್ಕಳನ್ನು ಬಹುಮುಖಿ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ ನಾಗರಿಕ ಪ್ರಜ್ಞೆ ಬೆಳೆಸುವ ಉದ್ದೇಶದಿಂದ ಹತ್ತು ವಿಷಯದ ಕುರಿತು ಸ್ವಯಂ ವಿವರಣಾತ್ಮಕ ಚಿತ್ರ ಸಹಿತ ಚಟುವಟಿಕೆಗಳ ಪುಸ್ತಕ ವಿತರಿಸಲಾಗಿದೆ. ಈ ಯೋಜನೆ ಪ್ರಕಾರ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳು ತಿಂಗಳ 3ನೇ ಶನಿವಾರ ಬ್ಯಾಗ್ ಇಲ್ಲದೇ ಶಾಲೆಗೆ ತೆರಳಿ ಸಂಭ್ರಮಿಸಬೇಕಿತ್ತು. ಜಿಲ್ಲೆಯ ಬಹುತೇಕ ಮಕ್ಕಳು ಎಂದಿನಂತೆ ಹೆಗಲಿಗೆ ಬ್ಯಾಗ್ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದಾರೆ. ಸರ್ಕಾರಿ, ಅನುದಾನಿತ ಹಾಗು ಅನುದಾನ ರಹಿತ ಸೇರಿ ಎಲ್ಲಾ ಶಾಲೆಗಳಲ್ಲೂ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕಿದ್ದ ಮಹತ್ವಾಕಾಂಕ್ಷಿ ಕಾರ್ಯಕ್ರಮ ಆರಂಭದಲ್ಲೇ ಹಳ್ಳ ಹಿಡಿದಂತಾಗಿದೆ.

### ಗಮನ ಹರಿಸದ ಅಧಿಕಾರಿಗಳು

ಶನಿವಾರ ಸಂಭ್ರಮದಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಶಾಲೆಗಳಿಗೆ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡುವಂತೆ ಇಲಾಖೆ ತಿಳಿಸಿದೆ. ಯಾವ ಅಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿಲ್ಲ. ಇಲಾಖೆಗೆ ವರದಿ ಸಲ್ಲಿಸುವುದು ಕಡ್ಡಾಯವಾಗಿರುವುದರಿಂದ ಯಾವುದಾದರೂ ಒಂದು ಚಟುವಟಿಕೆಯ ಫೋಟೊಗಳನ್ನು ನಿಗದಿತ ನಮೂನೆಯಲ್ಲಿ ಕಳುಹಿಸಿ ಸುಮ್ಮನಾಗುತ್ತಿದ್ದಾರೆ. ಕೆಲ ಶಾಲೆಗಳಲ್ಲಿ ಬ್ಯಾಗ್ ರಹಿತ ದಿನಕ್ಕೆ ಶಿಕ್ಷಕರು ಮುತುವರ್ಜಿ ವಹಿಸಿದರೂ ಕೆಲಸದೊತ್ತಡ, ಮೇಲಧಿಕಾರಿಗಳ ಅಸಹಕಾರ ಮಕ್ಕಳ ಸಂಭ್ರಮವನ್ನು ಕಸಿಯುತ್ತಿದೆ.

### ನಿಯಮ ಏನು ಹೇಳುತ್ತದೆ

ಬ್ಯಾಗಿನ ಭಾರವು ಮಗುವಿನ ತೂಕದ ಶೇ.10ರಷ್ಟು ಇರಬೇಕು ಎಂದು ಇಲಾಖೆ ತಿಳಿಸಿದೆ. ಪ್ರತಿ ತರಗತಿಯ ವಿದ್ಯಾರ್ಥಿ ಹೊಂದಿರಬೇಕಾದ ಬ್ಯಾಗಿನ ತೂಕದ ಪಟ್ಟಿ ನೀಡಿದೆ. 1 ಮತ್ತು 2ನೇ ತರಗತಿಯ ಮಕ್ಕಳಿಗೆ 1.6 ರಿಂದ 2.2 ಕೆ.ಜಿ. ಇದ್ದರೆ, 11 ಮತ್ತು 12ನೇ ತರಗತಿ ವಿದ್ಯಾರ್ಥಿಗಳ ಬ್ಯಾಗ್ 3.5 ರಿಂದ 5 ಕೆ.ಜಿ. ಇರಬೇಕು. ಈ ಮಾರ್ಗಸೂಚಿ ಬಹುತೇಕ ಶಾಲೆಗಳಲ್ಲಿ ಉಲ್ಲಂಘನೆಯಾಗುತ್ತಿದೆ. ಮೂಟೆ ಹೊತ್ತವರಂತೆ ಈಗಲೂ ಮಕ್ಕಳು ಬ್ಯಾಗ್ ಹೊತ್ತು ಶಾಲೆಗೆ ಹೋಗುವ ದೃಶ್ಯ ಸಾಮಾನ್ಯವಾಗಿದೆ. ಮಾದಕ ವಸ್ತುಗಳ ದುಷ್ಪರಿಣಾಮ, ಮಾಧ್ಯಮ ಮತ್ತು ಅಂತರ್ಜಾಲ ಬಳಕೆ, ಪೌಷ್ಟಿಕತೆ, ಸ್ವಾಸ್ಥ್ಯ ಮತ್ತು ನೈರ್ಮಲೀಕರಣ, ಸಾರ್ವಜನಿಕ ನೈರ್ಮಲ್ಯ-ಘನತ್ಯಾಜ್ಯ ನಿರ್ವಹಣೆ, ಆರೋಗ್ಯಕರ ಜೀವನಶೈಲಿ, ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿ, ರಸ್ತೆ ಸುರಕ್ಷತೆ, ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭಗಳಲ್ಲಿ ರಕ್ಷಣೆ ಹಾಗೂ ಭದ್ರತೆ, ಲಿಂಗ ಸಮಾನತೆಗೆ ಪ್ರೋತ್ಸಾಹ ಹೀಗೆ ತಿಂಗಳಿಗೊಂದು ವಿಚಾರಗಳ ಕುರಿತು ಮಕ್ಕಳಿಗೆ ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸಬೇಕೆಂಬುದು ನಿಯಮ. ಜಿಲ್ಲೆಯ ಯಾವ ಶಾಲೆಯಲ್ಲೂ ಇದು ಕಾರ್ಯರೂಪಕ್ಕೆ ಬಂದಿಲ್ಲ.

### ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕ

ಮಕ್ಕಳ ಬೌದ್ಧಿಕ ಸಾಮರ್ಥ್ಯ ವೃದ್ಧಿ ಹಾಗು ವ್ಯಕ್ತಿತ್ವ ವಿಕಸನ ದೃಷ್ಟಿಯಿಂದ ಬ್ಯಾಗ್ ರಹಿತ ದಿನ ಒಳ್ಳೆಯ ಯೋಜನೆ. ಆದರೆ ಶಾಲಾ ಮಟ್ಟದಲ್ಲಿ ಅನುಷ್ಠಾನ ಕಷ್ಟವಾಗಿದೆ ಎಂದು ನಗರದ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರೊಬ್ಬರು ಹೇಳಿದರು.

ಶನಿವಾರ ಸಂಭ್ರಮ ಜಾರಿ ಕುರಿತು ಮಾರ್ಗಸೂಚಿ, ವರದಿ ಸಲ್ಲಿಕೆಗೆ ಇಲಾಖೆ ಸೂಚಿಸಿದೆ. ಅದರಂತೆ ಯಾವುದಾದರೂ ಒಂದು ಚಟುವಟಿಕೆ ನಡೆಸಲಾಗುತ್ತಿದೆಯಾದರೂ ಅದು ಕಾಟಾಚಾರಕ್ಕೆ ಎಂಬಂತಾಗಿದೆ. ಫಲಿತಾಂಶ ಉತ್ತಮವಾಗಬೇಕು, ಅದೇ ಸಮಯವನ್ನು ಬೋಧನೆಗೆ ಮೀಸಲಿಡಿ. ಇಂತಹ ಕಾರ್ಯಕ್ರಮಗಳನ್ನೆಲ್ಲ ಮಾಡುತ್ತಾ ಕುಳಿತರೆ ಫಲಿತಾಂಶ ಕುಸಿಯುತ್ತದೆ. ಎಲ್ಲಾ ತರಗತಿ ಮುಗಿದ ಬಳಿಕ ಚಟುವಟಿಕೆ ಮಾಡಿಕೊಳ್ಳಿ ಎನ್ನುತ್ತಾರೆ. ಇಲಾಖೆ ಅಧಿಕಾರಿಗಳೇ ಆಸಕ್ತಿ ತೋರಿಸದ ಹಿನ್ನಲೆಯಲ್ಲಿ ಸುಮ್ಮನಾಗಬೇಕಾಗಿದೆಯೆಂದು ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಡಿಡಿಪಿಐ ಹೆಚ್.ಎಸ್. ಚಂದ್ರಶೇಖರ್ ಪ್ರತಿಕ್ರಿಯಿಸಿ, ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಬ್ಯಾಗ್ ರಹಿತ ದಿನ ನಡೆಸಲಾಗುತ್ತಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಸಂಬಂಧ ನಿಯಮಿತವಾಗಿ ವರದಿ ಸಲ್ಲಿಸುತ್ತಿದ್ದಾರೆ. ಎಲ್ಲಿಯಾದರೂ ಶನಿವಾರ ಸಂಭ್ರಮ ನಿಲ್ಲಿಸಿದ್ದು ಕಂಡುಬಂದರೆ ಅಂತಹ ಶಿಕ್ಷಕರಿಗೆ ಸೂಚನೆ ನೀಡಲಾಗುವುದು ಎಂದರು.

# ಪಾಲಿಕೆಯಲ್ಲಿ ರಾಷ್ಟ್ರ ನಾಯಕರಿಗೆ ಅವಮಾನ: ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾನಗರ ಪಾಲಿಕೆ ಮೇಯರ್ ಎಂ. ಚಂದ್ರೇಗೌಡ ಅವರು ತಮ್ಮ ಕಚೇರಿಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಫೋಟೊ ಪಕ್ಕದಲ್ಲಿ ತಮ್ಮ ಭಾವಚಿತ್ರ ಹಾಕಿ ರಾಷ್ಟ್ರ ನಾಯಕರಿಗೆ ಅವಮಾನ ಮಾಡಿದ್ದಾರೆಂದು ಆರೋಪಿಸಿ ವಿವಿಧ ದಲಿತಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಮೇಯರ್ ಕಚೇರಿ ಎದುರು ಧರಣಿ ನಡೆಸಿದ ಅಂಬೇಡ್ಕರ್ ಅಭಿಮಾನಿಗಳು, ಮಹಾತ್ಮ ಗಾಂಧೀಜಿ, ಅಂಬೇಡ್ಕರ್ ಅವರಿಗಿಂತ ಎಂ. ಚಂದ್ರೇಗೌಡ ದೊಡ್ಡವರಲ್ಲ. ತಾವು ರಾಷ್ಟ್ರ ನಾಯಕರಿಗೆ ಸಮಾನರೆಂದು ಹೇಳ ಹೊರಟಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು.

ವಾರದ ಹಿಂದೆ ಕಚೇರಿಗೆ ಭೇಟಿ ನೀಡಿ ತಮ್ಮ ಫೋಟೊ ಬೇರೆ ಕಡೆ ಅಳವಡಿಸಿ ಎಂದು ಸಲಹೆ ನೀಡಿದ್ದೆವು. ಚಂದ್ರೇಗೌಡ ಅವರು ನಮ್ಮ ಮನವಿಗೆ ಸ್ಪಂದಿಸಿಲ್ಲ. ಅಂಬೇಡ್ಕರ್ ಸಂವಿಧಾನ ರಚಿಸಿದ್ದರಿಂದಲೇ ಇವರೆಲ್ಲ ರಾಜಕಾರಣಿಗಳಾಗಿದ್ದಾರೆ. ಅವರ ಪಕ್ಕದಲ್ಲಿ ಫೋಟೊ ಹಾಕಿಕೊಳ್ಳಲು ಯಾವ ನೈತಿಕತೆಯಿದೆ ಎಂದು ಪ್ರಶ್ನಿಸಿದರು.

ಭಾರತೀಯ ಪರಿವರ್ತನಾ ಸಂಘದ ಜಿಲ್ಲಾಧ್ಯಕ್ಷ ರಮೇಶ್ ಹಾಕ್ಯ, ಮುಖಂಡರಾದ ದಿನೇಶ್, ರಾಮು, ಭಾನುಪ್ರಕಾಶ್, ಧರ್ಮರಾಜು, ಮಂಜುನಾಥ್, ಉಮೇಶ್ ಮತ್ತಿತರರಿದ್ದರು.

# ವಾರದ ಸಂತೆ ತೆರವಿಗೆ ಬೀದಿ ಬದಿ ವ್ಯಾಪಾರಿಗಳ ವಿರೋಧ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಿ.ಎಂ. ರಸ್ತೆಯ ಕೆಎಸ್‌ಆರ್‌ಟಿಸಿ ಡಿಪೋ ಬಳಿಯಿಂದ ಡೈರಿ ವೃತ್ತದ ವರೆಗೆ ಪ್ರತಿ ಮಂಗಳವಾರ ನಡೆಯುವ ವಾರದ ಸಂತೆಯನ್ನು ಸ್ಥಗಿತೊಳಿಸಲು ಮುಂದಾಗಿರುವ ಮಹಾನಗರ ಪಾಲಿಕೆ ನಿರ್ಧಾರವನ್ನು ವಾಪಾಸ್ ಪಡೆಯಬೇಕು ಎಂದು ಆಗ್ರಹಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಮಹಾನಗರ ಪಾಲಿಕೆ ಅಧಿಕಾರಿಗಳು ಇತ್ತೀಚೆಗೆ ರಸ್ತೆಯಲ್ಲಿ ವ್ಯಾಪಾರ ಮಾಡದಂತೆ ಸೂಚನೆ ನೀಡಿದ್ದಾರೆ. ಹಲವು ವರ್ಷಗಳಿಂದ ಬೀದಿ ಬದಿ ವ್ಯಾಪಾರಿಗಳು ಅಲ್ಲಿಯೇ ತರಕಾರಿ ಮಾರಾಟ ಮಾಡಿ ಬದುಕು ಕಟ್ಟಿಕೊಂಡಿದ್ದಾರೆ. ಏಕಾಏಕಿ ಸಂತೆಗೆ ಅಡ್ಡಿಪಡಿಸುವುದು ಸರಿಯಲ್ಲ. ಈ ಸಂಬಂಧ ಜಿಲ್ಲಾಧಿಕಾರಿ ಅವರು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಬೇಕೆಂದರು.

ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ. ಪೃಥ್ವಿ, ಸಿಐಟಿಯು ಮುಖಂಡ ಅರವಿಂದ್, ವ್ಯಾಪಾರಿಗಳಾದ ಸತೀಶ್, ಮಂಜುನಾಥ ಮತ್ತಿತರರು ಇದ್ದರು.

# ಮಣ್ಣು ಪರೀಕ್ಷೆ ಬಗ್ಗೆ ರೈತರಿಗೆ ಮಾಹಿತಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಮಂಗಳೂರು ಕೆಮಿಕಲ್ಸ್ ಆ್ಯಂಡ್ ಫರ್ಟಿಲೈಜರ್ಸ್ ಲಿಮಿಟೆಡ್ ಸಹಯೋಗದಿಂದ ತಾಲ್ಲೂಕಿನ ಹಂಪನಹಳ್ಳಿಯಲ್ಲಿ ಮಣ್ಣು ಮಾದರಿ ಸಂಗ್ರಹಣ ಅಭಿಯಾನ ನಡೆಯಿತು.

ಕಾರ್ಯಕ್ರಮದಲ್ಲಿ ರೈತರಿಗೆ ಮಣ್ಣು ಮಾದರಿ ಸಂಗ್ರಹಿಸುವ ಸರಿಯಾದ ವಿಧಾನವನ್ನು ತೋರಿಸಲಾಯಿತು. ಸಂಗ್ರಹಿಸಲಾದ ಮಾದರಿಗಳನ್ನು ಎಂಸಿಎಫ್ ಸಂಸ್ಥೆ ಪರೀಕ್ಷಿಸಿ ಮಣ್ಣಿನ ಆರೋಗ್ಯ ಕಾರ್ಡ್ ರೂಪದಲ್ಲಿ ಫಲಿತಾಂಶ ನೀಡಲಿದೆ. ಈ ಕಾರ್ಡ್‌ನಲ್ಲಿ ನೈಟ್ರೋಜನ್, ಫಾಸ್ಫರಸ್, ಪೊಟಾಷಿಯಂ, ಕಬ್ಬಿಣ, ತಾಮ್ರ, ಬೋರಾನ್ ಮುಂತಾದ ಪೋಷಕಾಂಶಗಳ ಪ್ರಮಾಣವಿರುವ ಮಾಹಿತಿ ನೀಡಲಾಗುತ್ತದೆ.

ಮಣ್ಣಿನ ಪರೀಕ್ಷೆಯಿಂದ, ಯಾವುದೇ ಬೆಳೆಗೆ ಎಷ್ಟು ಪ್ರಮಾಣದಲ್ಲಿ ಗೊಬ್ಬರ ನೀಡಬೇಕು ಎಂಬ ಮಾಹಿತಿ ರೈತರಿಗೆ ದೊರೆಯಲಿದೆ. ಇದರೊಂದಿಗೆ ಮಣ್ಣಿನ ಆರೋಗ್ಯ, ಬೆಳೆಗಳ ಗುಣಮಟ್ಟ ಮತ್ತು ಮನುಷ್ಯನ ಆರೋಗ್ಯದಲ್ಲಿಯೂ ಲಾಭವಾಗಲಿದೆ. ನೀರಾವರಿ ಭೂಮಿಯಲ್ಲಿ ವರ್ಷಕ್ಕೆ ಒಮ್ಮೆ ಹಾಗು ಮಳೆಯಾಶ್ರೀತ ಭೂಮಿಯಲ್ಲಿ ಮೂರು ವರ್ಷಕ್ಕೆ ಒಮ್ಮೆ ಮಣ್ಣು ಪರೀಕ್ಷೆ ಮಾಡಿಸಬೇಕೆಂದು ಮಣ್ಣು ವಿಜ್ಞಾನ ವಿಭಾಗ ಡಾ.ಅಶೋಕ್ ಮತ್ತು ಡಾ.ಚಿಕ್ಕರಾಜು ಅವರು ರೈತರಿಗೆ ಸಲಹೆ ನೀಡಿದರು.

# ಅರೇಹಳ್ಳಿ ಸಂತೆ ಮೈದಾನದಲ್ಲಿ ಅಶುಚಿತ್ವ ತಾಂಡವ



ಬೇಲೂರು: ತಾಲ್ಲೂಕಿನ ಅರೇಹಳ್ಳಿ ಪಟ್ಟಣದ ಸಂತೆ ಮೈದಾನದಲ್ಲಿ ಹಲವು ವಾರಗಳಿಂದ ಶುಚಿತ್ವವೇ ಮರೀಚಿಕೆಯಾಗಿದ್ದು, ತರಕಾರಿ, ಕೋಳಿ ಮಾಂಸದ ತ್ಯಾಜ್ಯ ಹಾಗೂ ಇತರೆ ಪದಾರ್ಥಗಳಿಂದ ಉಂಟಾದ ತ್ಯಾಜ್ಯ ಕೊಳೆತು ಗಬ್ಬು ಹರಡುತ್ತಿದೆ.

ಸಂತೆ ಮೈದಾನದಲ್ಲಿನ ಅಶುಚಿತ್ವದಿಂದಾಗಿ ವ್ಯಾಪಾರಿಗಳು ಹಾಗೂ ಗ್ರಾಹಕರು ಮೂಗು ಮುಚ್ಚಿಕೊಂಡೇ ಸಂಚಾರ ಮಾಡುವಂತ ಪರಿಸ್ಥಿತಿ ಎದುರಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಕೇಂದ್ರದಲ್ಲಿ ಪ್ರತಿ ಸೋಮವಾರ ನಡೆಯುವ ಸಂತೆಗೆ ಸುತ್ತಮುತ್ತಲಿನ ಗ್ರಾಮಗಳಷ್ಟೇ ಅಲ್ಲದೆ ಗಡಿಯಾಚೆಯ ತಾಲ್ಲೂಕುಗಳ ಅನೇಕ ಗ್ರಾಮಗಳಿಂದಲೂ ಸಾವಿರಾರು ಮಂದಿ ಗ್ರಾಹಕರು ಹಾಗು ವ್ಯಾಪಾರಿಗಳು ಆಗಮಿಸುತ್ತಾರೆ. ಇಂತಹ ಸಂದರ್ಭದಲ್ಲಿ ಶುಚಿತ್ವ ಕಾಪಾಡುವುದು ಗ್ರಾಮ ಪಂಚಾಯಿತಿಯ ಮೂಲಭೂತ ಜವಾಬ್ದಾರಿ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸಂತೆ ನಡೆಯುವ ಕೆಲವೇ ಗಂಟೆಗಳಲ್ಲೇ, ಕೆಲವು ಜಾಗಗಳಲ್ಲಿ ತರಕಾರಿ, ಮಾಂಸ ಹಾಗೂ ಇತರೆ ತ್ಯಾಜ್ಯ ಪದಾರ್ಥಗಳು ಕೊಳೆತು ದುರ್ವಾಸನೆ ಹರಡುವುದು ಸಾಮಾನ್ಯವಾಗಿದೆ. ಈ ದುರ್ವಾಸನೆಯ ಕಾರಣದಿಂದ ಕೆಲ ವ್ಯಾಪಾರಿಗಳಿಗೆ ವ್ಯವಹಾರ ನಡೆಸುವುದು ಕಷ್ಟವಾಗುತ್ತಿದೆ. ಇನ್ನೂ ಬೋಂಡಾ, ಬಜ್ಜಿ ಮತ್ತಿತರ ತಿಂಡಿಪದಾರ್ಥಗಳನ್ನು ಮಾರುವ ವ್ಯಾಪಾರಿಗಳು ಸಹಾ ದುರ್ವಾಸನೆ ನಡುವೆ ವ್ಯವಹಾರ ನಡೆಸಬೇಕಾದ ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಸಂತೆ ಮೈದಾನದ ಸುತ್ತಮುತ್ತಲಿರುವ ಮನೆಗಳು ಹಾಗೂ ದೇವಸ್ಥಾನಗಳಿಗೂ ಈ ಅಶುಚಿತ್ವದ ದುಷ್ಪರಿಣಾಮ ತಲುಪಿದೆ. ವಾರಕ್ಕೊಮ್ಮೆ ಸುಂಕ ಪಡೆಯುವ ಬಿಡ್ಡುದಾರರು ಸಹ ಶುಚಿತ್ವದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ಜನರು ಒತ್ತಾಯಿಸಿದ್ದಾರೆ. ಸಾವಿರಾರು ಜನರು ಸಂಚರಿಸುವ ಸ್ಥಳದಲ್ಲಿ ಕೊಳಚೆ ಬಿಟ್ಟುಬಿಟ್ಟರೆ, ಮಾರಕ ಕಾಯಿಲೆಗಳಿಗೆ ನಾವೇ ಆಹ್ವಾನ ನೀಡಿದಂತಾಗುತ್ತದೆ ಎಂದು ವ್ಯಾಪಾರಸ್ಥರು ಹಾಗೂ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ತಿಳಿಸಿದ್ದು, ಕೂಡಲೇ ತ್ಯಾಜ್ಯವನ್ನು ತೆರವುಗೊಳಿಸಿ ಸಂತೆ ಮೈದಾನದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಒತ್ತಾಯಿಸಿದ್ದಾರೆ.

# ತಾವರೆ ಹೂವು ಕೀಳಲು ಹೋದ ವ್ಯಕ್ತಿ ಸಾವು



ಆಲೂರು: ತಾಲ್ಲೂಕಿನ ಮಡಬಲು ಸಮೀಪದ ಬೆಳಮೆ ಕೆರೆಯಲ್ಲಿ ವರಮಹಾಲಕ್ಷ್ಮಿ ಹಬ್ಬದ ಪೂಜೆಗಾಗಿ ತಾವರೆ ಹೂವು ಕೀಳಲು ಕೆರೆಗೆ ಇಳಿದಿದ್ದ ವ್ಯಕ್ತಿ ಮೃತಪಟ್ಟಿದ್ದಾನೆ.

ಬೇಲೂರು ತಾಲ್ಲೂಕು ಬಿಕ್ಕೋಡು ಗ್ರಾಮದ ದೇವರಾಜ್ (38) ಮೃತರು. ಪಾಳ್ಯ ಸಮೀಪದ ರಾಮೇಶ್ವರ ಗ್ರಾಮದಲ್ಲಿ ವಾಸವಿದ್ದರು. ವರಮಹಾಲಕ್ಷ್ಮಿ ಹಬ್ಬದ ಹಿನ್ನಲೆಯಲ್ಲಿ ತಾವರೆ ಹೂವು ಕೀಳಲು ಕೆರೆಗೆ ಇಳಿದಿದ್ದರು. ಈ ಸಂದರ್ಭದಲ್ಲಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ ಎಂದು ತಿಳಿದುಬಂದಿದೆ. ವಿಷಯ ತಿಳಿದು ಸಕಲೇಶಪುರ ಅಗ್ನಿಶಾಮಕ ದಳದ ಸಿಬ್ಬಂದಿ ಸತತ 3 ಗಂಟೆಗಳ ಕಾಲ ಶೋಧ ಕಾರ್ಯಾಚರಣೆ ನಡೆಸಿ ಶವವನ್ನು ಪತ್ತೆಹಚ್ಚಿ ಹೊರತೆಗೆಯುವಲ್ಲಿ ಯಶಸ್ವಿಯಾದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-08

1942: ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧದ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡ ದಿನ. ಗಾಂಧೀಜಿ ಅವರು ಮಾಡು ಇಲ್ಲವೇ ಮಡಿ ಘೋಷಣೆ ಹೊರಡಿಸಿದರು.

1967: ದಕ್ಷಿಣ ಬಟ್ಟಾ ಹೋರಾಟ, ತಮಿಳುನಾಡಿನಲ್ಲಿ ಹಿಂದಿ ವಿರೋಧಿ ಹೋರಾಟಗಳಲ್ಲಿ ಇದೊಂದು ಪ್ರಮುಖ ದಿನ. ರಾಜ್ಯದಲ್ಲಿ ಹಿಂದಿ ಭಾಷೆ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು.

2008: ಜಾರ್ಜಿಯಾ-ರಷ್ಯಾ ಯುದ್ಧ, ದಕ್ಷಿಣ ಆಸೆಟಿಯಾ ಪ್ರಾದೇಶಿಕ ಸಮಸ್ಯೆಯಿಂದ ಜಾರ್ಜಿಯಾ ಹಾಗೂ ರಷ್ಯಾ ನಡುವಿನ ಯುದ್ಧ ಶುರುವಾಯಿತು.

### ಜನನ

1879: ಎಮಿಲ್ ಬೊರೆಲ್, ಫ್ರೆಂಚ್ ಗಣಿತಜ್ಞರು. ಪ್ರಾಬಬಿಲಿಟಿ ಥಿಯೋರಿಯ ಪ್ರಧಾನ ಸ್ಥಾಪಕರಲ್ಲಿ ಒಬ್ಬರು.

1925: ಅಲಿ ಬಂಟಾಯ್, ಪಿಲಿಪೀನ್ಸ್‌ನ ರಾಜಕೀಯ ನಾಯಕರಲ್ಲಿ ಒಬ್ಬರು.

### ಮರಣ

1975: ಬಾಲ ಗಂಗಾಧರ್ ತಿಲಕ್, ಸ್ವಾತಂತ್ರ್ಯ ಹೋರಾಟಗಾರ, ಪತ್ರಕರ್ತ ಹಾಗೂ ಸಮಾಜ ಸುಧಾರಕ.

# ವೃದ್ಧಾಶ್ರಮ ದಾರಿಗೆ ಡಾಂಬರು ಹಾಕಲು ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ತಾಲ್ಲೂಕಿನ ಶಂಭನಾಥಪುರ ಗ್ರಾಮದಲ್ಲಿರುವ ಮಧುಶ್ರೀ ವೃದ್ಧಾಶ್ರಮಕ್ಕೆ ತಲುಪುವ ರಸ್ತೆ ಸಂಪೂರ್ಣ ಕೆಸರುಮಯವಾಗಿದ್ದು, ಸಂಚಾರಕ್ಕೆ ಭಾರೀ ಸಮಸ್ಯೆಯಾಗಿದೆ.

ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೃದ್ಧಾಶ್ರಮವನ್ನು ಕಳೆದ ವರ್ಷದಿಂದ ಶಂಭನಾಥಪುರದ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ವಿಕಲಚೇತನರು, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಮಧುಶ್ರೀ ಮಹಿಳಾ ಸಮಾಜದಿಂದ ವೃದ್ಧಾಶ್ರಮ ಕಾರ್ಯನಿರ್ವಹಿಸುತ್ತಿದ್ದು 16 ವೃದ್ಧರು ಆಶ್ರಯ ಪಡೆದಿದ್ದಾರೆ. ಸುಸಜ್ಜಿತ ಕಟ್ಟಡ, ಅಗತ್ಯ ಸೌಕರ್ಯಗಳನ್ನು ವೃದ್ಧಾಶ್ರಮ ಹೊಂದಿದೆಯಾದರೂ ಸಂಪರ್ಕ ರಸ್ತೆಯಿಲ್ಲದೆ ಗೋಳು ಹೇಳತೀರದಾಗಿದೆ.

2020ರಲ್ಲಿ ಆರಂಭವಾಗಿರುವ ವೃದ್ಧಾಶ್ರಮಕ್ಕೆ ಜಿಲ್ಲೆ ಮಾತ್ರವಲ್ಲದೆ ರಾಜ್ಯದ ವಿವಿಧ ಭಾಗಗಳಿಂದ ವೃದ್ಧರು ಬರುತ್ತಾರೆ.

ಶೇ. 60 ರಷ್ಟು ಖರ್ಚು ಸರ್ಕಾರ ಭರಿಸಿದರೆ ಶೇ. 40 ರಷ್ಟು ಮಧುಶ್ರೀ ಮಹಿಳಾ ಸಮಾಜ ವಹಿಸಿಕೊಂಡಿದೆ. ಇಲ್ಲಿ ವಾಸ್ತವ್ಯ ಪಡೆದವರು ಸಹ ಅಚ್ಚುಕಟ್ಟು ವ್ಯವಸ್ಥೆಗೆ ಮೆಚ್ಚುಗೆ ಸೂಚಿಸಿದ್ದಾರೆ.

### 200 ಮೀಟರ್ ರಸ್ತೆಗೆ ನಿರ್ಲಕ್ಷ್ಯ

ಅರಕಲಗೂಡು ಪಟ್ಟಣಕ್ಕೆ ಸಮೀಪದಲ್ಲಿರುವ ವೃದ್ಧಾಶ್ರಮ ಮುಖ್ಯ ರಸ್ತೆಯಿಂದ ಕೇವಲ 200 ಮೀ. ದೂರದಲ್ಲಿದೆ. ಅದು ಕಾಲುವೆ ರಸ್ತೆಯಾಗಿದ್ದು ಡಾಂಬರು ಭಾಗ್ಯ ಕಂಡಿಲ್ಲ. ಅದರಿಂದ ವೃದ್ಧಾಶ್ರಮಕ್ಕೆ ದಿನಸಿ ಸಾಮಾಗ್ರಿ ಕೊಂಡೊಯ್ಯಲು, ವೃದ್ಧರನ್ನು ಕರೆದುಕೊಂಡು ಬರಲು, ಆಸ್ಪತ್ರೆಗೆ ಕರೆದೊಯ್ಯಲು ತೊಂದರೆಯಾಗುತ್ತಿದೆ. ಕಡಿಮೆ ಖರ್ಚಿನಲ್ಲಿ ಆಗಬಹುದಾದ ಕಾಮಗಾರಿ ಕುರಿತು ಸ್ಥಳೀಯ ಶಾಸಕರು, ಅಧಿಕಾರಿಗಳ ಗಮನಕ್ಕೆ ಸಾಕಷ್ಟು ಸಲ ತಂದರೂ ಪ್ರಯೋಜನವಾಗಿಲ್ಲ. ಡಾಂಬರು ರಸ್ತೆ ಮಾಡಿಕೊಟ್ಟರೆ ಅನುಕೂಲವಾಗುತ್ತದೆಂದು ಮಧುಶ್ರೀ ಮಹಿಳಾ ಸಮಾಜದ ಮಧು ಅವರು ಮನವಿ ಮಾಡಿದರು.

# ಕಾಡು ಹಂದಿಗಳ ದಾಳಿ ಫಸಲಿಗೆ ಬಂದ ಜೋಳ ನಾಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಎಡೆಬಿಡದ ಮಳೆ ಮತ್ತು ರೋಗ ಬಾಧೆಯ ನಡುವೆ ಕಷ್ಟಪಟ್ಟು ಬೆಳೆದ ಮುಸುಕಿನ ಜೋಳವು ಫಸಲಿಗೆ ಬಂದ ಸಂದರ್ಭದಲ್ಲಿ ಕಾಡು ಹಂದಿಗಳ ಹಿಂಡು ದಾಳಿ ನಡೆಸಿ ನಾಶಗೊಳಿಸಿರುವ ಘಟನೆ ತಾಲ್ಲೂಕಿನ ಹೆಬ್ಬಾಳು ಗ್ರಾಮದಲ್ಲಿ ನಡೆದಿದೆ.

ಜಯದೇವಪ್ಪ ಹಾಗೂ ಪರ್ವತೇಗೌಡರಿಗೆ ಸೇರಿದ ಆರು ಎಕರೆ ಜಮೀನಿನಲ್ಲಿ ಮುಸುಕಿನ ಜೋಳ ಫಸಲು ಕಟ್ಟುತ್ತಿದ್ದ ಸಂದರ್ಭದಲ್ಲಿ 25ಕ್ಕೂ ಹೆಚ್ಚು ಕಾಡು ಹಂದಿಗಳು ನುಗ್ಗಿ ಜೋಳವನ್ನು ಅರೆ-ಬರೆ ತಿನ್ನುವ ಮೂಲಕ ಇಡೀ ಬೆಳೆ ನಾಶಪಡಿಸಿವೆ. ರೈತನಿಗೆ ದಿಕ್ಕು ತೋಚದಂತಾಗಿದೆ. ಹಂದಿಗಳು ತಿಂದು ಬಿಟ್ಟ ಜೋಳದ ತೆನೆ ಮತ್ತು ಕಡ್ಡಿಯನ್ನು ಜಾನುವಾರುಗಳು ಕೂಡ ತಿನ್ನುವುದಿಲ್ಲ. ಕಳೆದ ಎರಡು ತಿಂಗಳಲ್ಲಿ ಹೊಲ ಉಳುಮೆ ಮಾಡಿಸಿ ದುಬಾರಿ ಬಿತ್ತನೆ ಬೀಜ ಮತ್ತು ರಸಗೊಬ್ಬರ, ಕೂಲಿ ಕಾರ್ಮಿಕರು, ರೋಗಬಾಧೆ ನಡುವೆ ಪೈರು ಅಲ್ಪ-ಸ್ವಲ್ಪ ಚೆನ್ನಾಗಿ ಬಂದಿತ್ತು. ಅದರಿಂದ ಬ್ಯಾಂಕ್ ಸಾಲ ಮತ್ತು ಕೈಸಾಲ ತೀರಿಸಬಹುದು ಎಂಬ ರೈತನ ಲೆಕ್ಕಚಾರ ತಲೆ ಕೆಳಗಾಗಿದೆ. ಇಡೀ ಹೊಲವನ್ನು ಹಂದಿಗಳು ಧ್ವಂಸ ಮಾಡಿದ ಕಾರಣ ರೈತ ಕುಟುಂಬಗಳು ಕಂಗಾಲಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕ್ರಮವಹಿಸಬೇಕು ಎಂದು ಹೇಳಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಗದೀಶ್ ಮಾತನಾಡಿ, ಇತ್ತೀಚಿನ ದಿನದಲ್ಲಿ ಕಾಡು ಹಂದಿಗಳ ಕಾಟ ಹೆಚ್ಚಾಗಿದೆ. ಜೋಳದ ಬಿತ್ತನೆಯಾದ ದಿನದಿಂದ ಮೊಳಕೆ ಬರುವ ತನಕ ರಾತ್ರಿ ವೇಳೆ ಕಾವಲು ಇರಬೇಕು. ಈಗಾಗಲೇ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಡು ಹಂದಿಗಳ ಕಾಟ ತಪ್ಪಿಸುವುದಲ್ಲದೆ, ಬೆಳೆ ನಷ್ಟವಾದ ರೈತರಿಗೆ ಸೂಕ್ತ ಪರಿಹಾರ ಶೀಘ್ರವೇ ನೀಡಬೇಕು. ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ವಲಯ ಅರಣ್ಯಾಧಿಕಾರಿ ಯತೀಶ ಮಾತನಾಡಿ, ಮುಸುಕಿನ ಜೋಳಕ್ಕೆ ಕಾಡು ಹಂದಿಗಳು ನುಗ್ಗಿ ದಾಳಿ ನಡೆಸಿದ ಬಗ್ಗೆ ಈಗಾಗಲೇ ವರದಿಗಳು ಬಂದಿವೆ. ನಷ್ಟದ ಬಗ್ಗೆ ಸೂಕ್ತ ದಾಖಲೆಯನ್ನು ನೀಡಿದರೆ ಪರಿಹಾರ ನೀಡುವ ಅವಕಾಶವಿದೆ. ಕಳೆದ ಭಾರಿ ಸಲ್ಲಿಸಿದ ಅರ್ಜಿಗಳಿಗೆ ಸದ್ಯ ಪರಿಹಾರ ರೈತರ ಖಾತೆಗೆ ಜಮೆಯಾಗಿದೆ ಎಂದರು.

# ಚನ್ನರಾಯಪಟ್ಟಣದಲ್ಲಿ ಹಬ್ಬದ ವ್ಯಾಪಾರ ಜೋರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವರಮಹಾಲಕ್ಷ್ಮೀ ಹಬ್ಬ ಹಾಗೂ ಪೂಜೆಯ ಪ್ರಯುಕ್ತ ಗುರುವಾರ ಹಣ್ಣು, ಹೂವು ಹಾಗೂ ಪೂಜಾ ಸಾಮಗ್ರಿಗಳ ವ್ಯಾಪಾರ-ವಹಿವಾಟು ಜೋರಾಗಿ ನಡೆಯಿತು.

ಶುಕ್ರವಾರ ವರಮಹಾಲಕ್ಷ್ಮೀ ಹಬ್ಬ ಇರುವುದರಿಂದ ಮುಂಜಾನೆಯೇ ದೇವಿಯ ಪೂಜೆ ನೆರವೇರಿಸಬೇಕಿರುವ ಹಿನ್ನೆಲೆ ಹಣ್ಣು, ಹೂವು ಹಾಗೂ ಪೂಜಾ ಸಾಮಗ್ರಿಗಳನ್ನು ಖರೀದಿಸಲು ಸಾರ್ವಜನಿಕರು ಮುಗಿಬಿದ್ದರು.

ಗುರುವಾರ ಬೆಳಗಿನ ಮುಂಜಾನೆಯಿಂದಲೇ ವ್ಯಾಪಾರ ಪ್ರಾರಂಭಗೊಂಡಿದ್ದು ಜನತೆ ನೂಕು ನುಗ್ಗಲಿನಲ್ಲಿ ಖರೀದಿಸುತಿದ್ದ ದೃಶ್ಯ ಕಂಡುಬಂದಿತು. ಪಟ್ಟಣದ ಮಾರುಕಟ್ಟೆ, ಹಿರೀಸಾವೆ, ಶ್ರವಣಬೆಳಗೊಳ, ನುಗ್ಗೇಹಳ್ಳಿ, ಬಾಗೂರು, ದಿಡಗ ಸೇರಿದಂತೆ ಸಂತೆ ಹಾಗೂ ಮಾರುಕಟ್ಟೆಗಳಲ್ಲಿ ಜನ ಗಿಜಿಗುಡುತ್ತಿರುವುದು ಕಂಡುಬಂದಿತು.



ಸೇಬು ತಲಾ ಕೆ.ಜಿ. 150 ರಿಂದ 180 ರೂ., ದ್ರಾಕ್ಷಿ 150 ರೂ. ಕಿತ್ತಳೆ 120 ರೂ. ಮೋಸಂಬಿ 80, ಮರಸೇಬು 90 ರೂ. ಸೀಬೆ 100 ರೂ. ಇದ್ದರೆ ಹೂವಿನ ಬೆಲೆ ಮಾತ್ರ ಗಗನ ಮುಟ್ಟಿತ್ತು. ಒಂದು ಮಾರು ಸೇವಂತಿಗೆ ಹೂವು 150 ರಿಂದ 180 ರೂ. ಇತ್ತು. ಮಲ್ಲಿಗೆ, ಕಾಕಡ, ಕನಕಾಂಬರಿ ಸೇರಿದಂತೆ ಇತರೆ ಹೂವಿನ ಬೆಲೆಯೇನು ಕಡಿಮೆ ಇರಲಿಲ್ಲ.

ಅಲ್ಲದೆ ಬಟ್ಟೆ-ಜವಳಿ, ಚಿನ್ನ-ಬೆಳ್ಳಿ ಅಂಗಡಿಗಳಲ್ಲಿ ಜನ ತುಂಬಿಕೊಂಡಿದ್ದು ಒಡವೆ-ವಸ್ತ್ರಗಳನ್ನು ಖರೀದಿ ಮಾಡಿದರು. ಇನ್ನು ವಿಶೇಷ ಸಿಹಿ ತಯಾರಿಕೆ ಸಲುವಾಗಿ ದಿನಸಿ ಅಂಗಡಿಗಳಲ್ಲಿಯೂ ಜನಜಂಗುಳಿ ಸೇರಿತ್ತು.

ಹಣ್ಣು, ಹೂವು ಹಾಗೂ ಇತರೆ ಖರೀದಿ ಸಲುವಾಗಿ ಎಲ್ಲಂದರಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸಿದ್ದರಿಂದ ಆ ರಸ್ತೆ ವ್ಯಾಪ್ತಿಯಲ್ಲಿ ಸಂಚಾರಕ್ಕೆ ಅಡ್ಡಿಯಾಗಿತ್ತು. ಬೆಳಗ್ಗೆ ಮುಂಜಾನೆಯಿಂದ ಸಂಜೆ ಸುಮಾರಿನವರೆಗೂ ವ್ಯಾಪಾರ ವಹಿವಾಟು ಜೋರಾಗಿಯೇ ನಡೆಯಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248